ನಿಯಮ 351ರ ಮೇರೆಗೆ

1. ಹೊಸಪೇಟೆ ತಾಲ್ಲೂಕಿನಲ್ಲಿರುವ ಕಂಪ್ಲಿ ಸಕ್ಕರೆ ಕಾರ್ಖಾನೆಯ ಕೆಲಸ ಕಾರ್ಯ ನಿಂತಿರುವುದು

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಹೊಸಪೇಟೆ ತಾಲ್ಲೂಕಿನಲ್ಲಿರುವ ಕಂಪ್ಲಿ ಸಕ್ಕರೆ ಕಾರ್ಖಾನೆಯ ಕೆಲಸ ಕಾರ್ಯ ನಿಂತು ಹೋಗಿ ಸುಮಾರು ಎರಡು ವರ್ಷವಾಗಿದೆ. ಅಲ್ಲಿರುವ ರೈತರಿಗೆ ಮತ್ತು ಕಾರ್ಮಿಕರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಅಲ್ಲಿರುವ ರೈತರ ಮತ್ತು ಕಾರ್ಮಿಕರ ಬಗ್ಗೆ ಚಿಂತನೆ ಬಹಳಷ್ಟು ಮಾಡಬೇಕಾಗಿದೆ. ಈಗ ಬಹಳ ದೊಡ್ಡ ಚಳುವಳಿ ನಡೆಯತಕ್ಕ ವಿಚಾರ ಅಲ್ಲಿರುವ ಜನರ ಆಲೋಚನೆಯಲ್ಲಿ ಇದೆ. ಇದಕ್ಕೆ ಸರ್ಕಾರದವರು ಈಗ ವಿಶೇಷ ಅಧಿಕಾರಿಯನ್ನು ನೇಮಿಸಿದ್ದಾರೆ ಎಂದು ಗೊತ್ತಾಗಿದೆ. ಆದರೆ ಅವರಿಂದ ಇಲ್ಲಿಯವರೆಗೂ ಯಾವುದೇ ರೀತಿಯ ಕಾರ್ಯಾಚರಣೆಯು ನಡೆದಿರುವುದಿಲ್ಲ. ಈಗ ಅತಿ ಮುಖ್ಯವಾಗಿ ಈ ಕಾರ್ಖಾನೆ ಪ್ರಾರಂಭ ಮಾಡುವುದಾದರೆ ಯಾವಾಗ ಮಾಡುತ್ತೀರಿ? ಇಲ್ಲಾ; ಅದನ್ನು ಏನಾದರೂ ಸರ್ಕಾರ ಮಾರಾಟ ಮಾಡುವ ಆಲೋಚನೆಯಲ್ಲಿದೆಯೇ? ಇಲ್ಲ, ಆ ಕಾರ್ಖಾನೆಯನ್ನು ಬೇರೆಯವರಿಗೆ ಯಾರಿಗಾದರೂ ಲೀಸ್‌ಗೆ ಕೊಟ್ಟು ನಡೆಸಲಿಕ್ಕಾದರೂ ಸರ್ಕಾರ ತಯಾರಿದೆಯೇ? ಹೇಗಾದರೂ ಮಾಡಿ ಆ ಕಾರ್ಖಾನೆ ನಿಲ್ಲಬಾರದು ಅದು ಕೆಲಸಮಾಡಬೇಕು ಎನ್ನತಕ್ಕಂಥ ಅಭಿಪ್ರಾಯ ನಮ್ಮಲ್ಲಿ ಇದೆ. ಇನ್ನೊಂದು ಮುಖ್ಯವಾದ ಅಂಶ. ಈಗ ಘನ ಸರ್ಕಾರದವರು ತುರ್ತಾಗಿ ಆಲೋಚನೆ ಮಾಡಿ ಅದಕ್ಕೆ ಒಂದು ದೇಶ ಹೊರಡಿಸಿದರೆ ರೈತರಿಗೆ ಕಬ್ಬು ಬೆಳೆಯಲಿಕ್ಕೆ, ಕಬ್ಬು ಹಾಕಲಿಕ್ಕೆ ಅನುಕೂಲವಾಗುತ್ತದೆ. ಮತ್ತೆ 1995-96ನ ಸಾಲಿಗೆ ಕಬ್ಬು ಬೆಳೆಸಲಿಕ್ಕೆ ಅನುಕೂಲವಾಗುತ್ತದೆ. ಇಲ್ಲ ಅಂದರೆ ಸಾಧ್ಯವಾಗುವುದಿಲ್ಲ; ಅದಕ್ಕೆ ತಾವು ಏನು ಹೇಳುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ಜವಳಿ, ವಿಜ್ಞಾನ ತಂತ್ರಕಲೆ ಹಾಗೂ ಪರಿಸರ ಮತ್ತು ಜೀವಶಾಸ್ತ್ರ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಕಂಪ್ಲಿ, ಬಳ್ಳಾರಿ ಜಿಲ್ಲೆ ಇದು 1993-94ನೇ ಸಾಲಿನಲ್ಲಿ ಕಬ್ಬು ಅರೆಯುವ ಕೆಲಸವನ್ನು ನಿರ್ವಹಿಸಿರುವುದಿಲ್ಲ, ಪ್ರಸ್ತುತ ಹಂಗಾಮು ಅಂದರೆ 1994-95ನೇ ಸಾಲಿನಲ್ಲೂ ಕಬ್ಬು ಅರೆಯುವಿಕೆಯನ್ನು ಆರಂಭಿಸಿರುವುದಿಲ್ಲ, ಇದಕ್ಕೆ ಮುಖ್ಯ ಕಾರಣ ಹಣಕಾಸಿನ ತೊಂದರೆಯಾಗಿರುತ್ತದೆ. ಕಾರ್ಖಾನೆಯ ವ್ಯಾಪ್ತಿಯಲ್ಲಿ ಸುಮಾರು 40,000 ಟನ್ ಕಬ್ಬು ಉತ್ಪಾದನೆಯಿದ್ದು ಕಾರ್ಖಾನೆಯು ಕಬ್ಬು ಅರೆಯುವ ಕೆಲಸವನ್ನು ಆರಂಭಿಸದಿರುವುದರಿಂದ ಈಗಾಗಲೇ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸಮೀಪದ ಸಕ್ಕರೆ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದೂ ಹಾಗೂ ಸೂಕ್ತ ಏರ್ಪಾಡು ಮಾಡಬೇಕೆಂದು ಜಿಲ್ಲಾಧಿಕಾರಿಗಳವರಿಗೆ ತಿಳಿಸಲಾಗಿದೆ. ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಬೆಳೆದಿರುವ ಕಬ್ಬನ್ನು ಪಕ್ಕದ ಸಮೀಪದ ಕಾರ್ಖಾನೆಗೆ ಸಾಗಾಣಿಕೆ ಮಾಡಿಕೊಳ್ಳಲು ಸೂಕ್ತ ಏರ್ಪಾಡು ಮಾಡಲಾಗುವುದು.

ಕಾರ್ಖಾನೆಯ ಹಿಂದಿನ ಸಾಲುಗಳಲ್ಲಿ ಕಬ್ಬಿನ ಕೊರತೆಯಿಂದಾಗಿ ತೃಪ್ತಿದಾಯಕವಾಗಿ ಕೆಲಸ ನಿರ್ವಹಿಸಿರುವುದಿಲ್ಲ, ಈ ಕಾರಣದಿಂದ ಹಾಗೂ ಕಳೆದ ಹಂಗಾಮಿನಲ್ಲಿ ಕಬ್ಬು ಅರೆಯದಿರುವುದರಿಂದ ತೀವ್ರ ಆರ್ಥಿಕ ತೊಂದರೆ ಉಂಟಾಗಿದ್ದು ನೌಕರರಿಗೆ ಒಂದು ವರ್ಷದ ಪಾವತಿಗಾಗಿ ಸರ್ಕಾರವು ದಿನಾಂಕ 2-3-1994 ರ ಆದೇಶದ ಪ್ರಕಾರ ರೂ. 20 ಲಕ್ಷವನ್ನು ಮತ್ತು ದಿನಾಂಕ 7-9-1994 ರ ಆದೇಶದ ಪ್ರಕಾರ ರೂ. 15 ಲಕ್ಷವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಇಲ್ಲಿಯವರೆಗೆ ಸರ್ಕಾರದಿಂದ ರೂ. 313-30 ಲಕ್ಷ ಆರ್ಥಿಕ ನೆರವನ್ನು ನೀಡಲಾಗಿದೆ.

ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆಯು 1958ರಲ್ಲಿ ಸ್ಥಾಪನೆಯಾಗಿದ್ದು ಬಹಳ ಹಳೆಯದಾಗಿರುತ್ತದೆ. ಇದರ ಕಬ್ಬು ಅರೆಯುವ ಸಾಮರ್ಥ್ಯ ದಿನವಹಿ 1200 ಮೆಟ್ರಿಕ್ ಟನ್ ಆಗಿರುತ್ತದೆ. ಈ ಕಾರ್ಖಾನೆಯ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾ ಮಂಡಲದ ಮತಿಯಿಂದ ನಂತರ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ರವರಿಂದ ಅಧ್ಯಯನ ವರದಿಯನ್ನು ಪಡೆಯಲಾಗಿರುತ್ತದೆ. ಹಾಲಿ ಇರುವ ಸಾಮರ್ಥ್ಯದಲ್ಲೇ ಆಧುನೀಕರಣ ಗೊಳಿಸಲು ಅಂದಾಜು ರೂ. 1800 ಲಕ್ಷ ಹಾಗೂ ಕಬ್ಬು ಅರೆಯುವ ಸಾಮರ್ಥ್ಯವನ್ನು ದಿನವಹಿ 2500 ಟನ್‌ಗೆ ಹೆಚ್ಚಿಸಲು ಅಂದಾಜು ರೂ. 3500 ಲಕ್ಷ ಬೇಕಾಗುವುದೆಂದೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾ ಮಂಡಳದ ಅಭಿಪ್ರಾಯವಾಗಿರುತ್ತದೆ. ಟಾಟಾ ಕನ್ಸ್‌ಲ್ಟೆನ್ಸಿ ವರದಿಯ ಪ್ರಕಾರ ಈ ಕಾರ್ಖಾನೆಯನ್ನು ಇರುವ ಸಾಮರ್ಥ್ಯದಲ್ಲೇ ಆರಂಭಿಸಲು ರೂ. 705.42 ಲಕ್ಷ ಅಗತ್ಯವಿದ್ದು, ಇಷ್ಟನ್ನು ವೆಚ್ಚ ಮಾಡಿದ ಮೇಲೂ ಸುಮಾರು 7 ವರ್ಷಗಳವರೆವಿಗೆ ಕೆಲಸ ನಿರ್ವಹಿಸಲು ಸಾಧ್ಯವೆಂದೂ ಹಾಗೂ ಆರ್ಥಿಕವಾಗಿ ಸಾಧ್ಯತೆ ಇರಬೇಕಾದರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು 2500 ಟನ್‌ಗಳಿಗೆ ಹೆಚ್ಚಿಸಬೇಕೆಂದು ಅಭಿಪ್ರಾಯವಾಗಿರುತ್ತದೆ.

ಈ ಕಾರ್ಖಾನೆಯ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಉದ್ದೇಶದಿಂದ ಉನ್ನತ ಮಟ್ಟದ ವಿವಿಧ ಹಂತಗಳಲ್ಲಿ ಸಭೆಗಳನ್ನು ನಡೆಸಲಾಗಿರುತ್ತದೆ. ದಿನಾಂಕ 25-11-1994 ರಂದು ಕೂಡ ಕಾರ್ಯದರ್ಶಿ, ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು, ಅಪೆಕ್ಸ್‌ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕುಗಳು ಈಗಾಗಲೇ ಸುಮಾರು ರೂ. 300 ಲಕ್ಷ ಸಾಲ ಬಾಕಿ ಇರುವುದರಿಂದ ಹೊಸ ಸಾಲವನ್ನು ನೀಡಲು ಸಮ್ಮತಿಸಿರುವುದಿಲ್ಲ, ಕಾರ್ಖಾನೆಯ ಮತ್ತು ರೈತರ ಹಿತದೃಷ್ಟಿಯಿಂದ ಹಣಕಾಸು ನೆರವು ನೀಡುವುದನ್ನು ತೀವ್ರವಾಗಿ ಪರಿಶೀಲಿಸಬೇಕೆಂದು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿಗೆ ತಿಳಿಸಲಾಗಿರುತ್ತದೆ.

ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯ ಯಂತ್ರೋಪಕರಣಗಳು ಹಳೆಯದಾಗಿರುವುದರಿಂದ, ಕಬ್ಬಿನ ಉತ್ಪಾದನೆ ಕಡಿಮೆ ಇರುವುದರಿಂದ ಆರ್ಥಿಕ ದುಸ್ಥಿತಿ ತಲುಪಿರುವುದರಿಂದ ಹಾಗೂ ಹಾಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯ ಆರ್ಥಿಕವಾಗಿ ಶಕ್ಯ ಇಲ್ಲದಿರುವುದರಿಂದ ಈ ಕಾರ್ಖಾನೆಯ ಸುಧಾರಣೆಗಾಗಿ ಲಕ್ಷಾಂತರ ರೂ.ಗಳ ನೆರವು ಅಗತ್ಯವಿರುತ್ತದೆ. ಆದುದರಿಂದ ಸಂಬಂಧಪಟ್ಟವರ ಸಭೆಯನ್ನು ಕರೆದು ಚರ್ಚಿಸಿ ಸೂಕ್ತ ಕ್ರಮವಿಡಲಾಗುವುದು.

2. ವಿಟ್ಲ ಕ್ಷೇತ್ರದಲ್ಲಿ 1993-94ನೇ ವರ್ಷದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಮಂಜೂರಾಗಿರುವ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲದಲ್ಲಿ 1993-94ನೇ ವರ್ಷದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಮಂಜೂರಾಗಿ ಎರಡು ವರ್ಷಗಳಿಂದ ಪಂಚಾಯಿತಿ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿದೆ. ಬರುವ ವರ್ಷ ತರಗತಿಗಳನ್ನು ನಡೆಸಲು ಕೊಠಡಿಗಳ ಕೊರತೆಯಿಂದ ಅಸಾಧ್ಯವಾಗಿದ್ದು ತಕ್ಷಣ ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಒದಗಿಸಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಈಗ ಹೊಸದಾಗಿ ಮಂಜೂರಾಗಿರುವ ಕಾಲೇಜುಗಳು ಇವೆ. ನಿವೇಶನ ತೆಗೆದುಕೊಂಡಿದ್ದಾರೆ. ಅದಕ್ಕೆ ಪ್ಲಾನ್ ಎಸ್ಟಿಮೇಟ್ ಮಾಡುವುದಕ್ಕೆ ಪಿ.ಡಬ್ಲೂಡಿ ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇವೆ. ಈ ವರ್ಷದ ಬಡ್ಜೆಟ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಪಡುತ್ತೇವೆ.